**OS 123/2020**
**PW1**

ದಿನಾಂಕ:31.01.2026ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **2**ನೇ ಪ್ರತಿವಾದಿ ಪರ ಶ್ರೀ. ಬಿ ವಿ ಕೆ ವಕೀಲರಿಂದಃ

ನನ್ನ ಕನ್ನಡ ಓದಲು ಬರೆಯಲು ಬರುವುದಿಲ್ಲ. **1**ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು **21** ಲಕ್ಷ **25** ಸಾವಿರ ರೂಗಳಿಗೆ ಮಾರಾಟ ಮಾಡಿದ್ದೆ. ನಿಪಿ-**5** ರ ಪ್ರಕಾರ **1**ನೇ ಪ್ರತಿವಾದಿಯಿಂದ ರೂ **16,25,000/-** ನಗದು ಹಾಗೂ ತಲಾ **3,00,000/-** ಹಾಗೂ **2,00,000/-** ಚೆಕ್ ನೀಡಿದ್ದಾರೆ ಎಂದು ಬರೆದಿದ್ದಾರೆ ಎಂದರೇ ಹೌದು. ಸಾಕ್ಷಿ ಮುಂದುವರೆದು ರೂ **3,00,000/-** ಹಾಗೂ **2,00,000/-** ಚೆಕ್ ಕೊಟ್ಟಿದ್ದರು ಅದೇ ದಿನ ನಿಪಿ-**5** ನೋಂದಾಣಿಯಾಗುವ ಪೂರ್ವದಲ್ಲಿ ಇನ್ನೊಂದು ಕ್ರಯ ಕರಾರು ಮಾಡಿ ಅದರಲ್ಲಿ **2** ಚೆಕ್ ಗಳನ್ನು ತೋರಿಸಿ ಕೊಟ್ಟಿರುತ್ತಾರೆ. ನಿಪಿ-**5** ರ ಪ್ರಕಾರ ಎಷ್ಟು ಹಣ ಸಂದಾಯ ಆಗಿದೆ ಎಂದರೆ ಸಾಕ್ಷಿ ರೂ. **10,25,000/-** ಎಂದು ರೂ **3,00,000/-** ಹಾಗೂ **2,00,000/-** ಚೆಕ್‌ಗಳು ಸೇರಿ ಬಂದಿರುತ್ತದೆ.

**2.** ರೂ **5,00,000/-** ಚೆಕ್ ಗೆ ಸಂಬಂದಪಟ್ಟಂತೆ ಕಿರಿಯ ವಿಭಾಗ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೀರ ಎಂದರೇ ಇಲ್ಲ. ಇದೇ ನ್ಯಾಯಾಲಯದಲ್ಲಿ ದಾಖಲಿಸಿದ್ದೇನೆ. ನಿಪಿ-**5** ರಲ್ಲಿ ತಿಳಿಸಿರುವ **2** ಚೆಕ್ ಗಳನುನ ನಿಪಿ-**5** ರ ನೋಂದಾಣಿ ಕಾಲಕ್ಕೆ ನಿಮಗೆ ಕೊಟ್ಟಿದ್ದರ ಎಂದರೆ ಹೌದು. ರೂ **5,00,000/-** ಚೆಕ್ ಮತ್ತು ರೂ **6,00,000/-** ಚೆಕ್ ಇದೇ ಕ್ರಯಕ್ಕೆ ಸಂಬಂಧ ಪಟ್ಟಂತೆ ಆಗಿದೆ ಎಂದರೇ ಸಾಕ್ಷಿ ರೂ **11,00,000/-** ಇಲ್ಲದ ಇನ್ನೊಂದು ಕ್ರಯ ಕರಾರಿನಲ್ಲಿ ತೋರಿಸಿದ್ದಾರೆ. ಕ್ರಯ ಪತ್ರ ಮಾಡುವ ಪೂರ್ವದಲ್ಲಿ ನನ್ನ ಮತ್ತು **1**ನೇ ಪ್ರತಿವಾದಿ ನಡುವ ಯಾವುದೇ ಕ್ರಯ ಕರಾರು ಆಗಿರುವುದಿಲ್ಲ. ಕ್ರಯ ಪತ್ರ ಆಗುವ **2** ದಿನ ಪೂರ್ವದಲ್ಲಿ ಮಾತುಕತೆಯನ್ನು ಮಾಡಿರುತ್ತೇವೆ. ಮಾತುಕತೆ ಮಾಡುವಾಗ ಕ್ರಯವನ್ನು ಖಚಿತ ಪಡಿಸಿಕೊಳ್ಳಲು **4** ಚೆಕ್ ಗಳನ್ನು ನೀಡಿದ್ದು ಅವುಗಳಲ್ಲಿ

**2** ನ್ನು ಕ್ರಯ ಪತ್ರದಲ್ಲಿ ತೋರಿಸಿ ಉಳಿದ **2** ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡಿದ್ದೀರ ಎಂದರೆ ಸುಳ್ಳು.

**3. 1**ನೇ ಪ್ರತಿವಾದಿ ಕ್ರಯ ಪತ್ರ ಮಾಡಿಕೊಳ್ಳುವಾಗ **2** ಚೆಕ್ ಗಳನ್ನು ಕೊಟ್ಟು ಕ್ರಯ ಕರಾರು ಪತ್ರ ಮಾಡಿಕೊಂಡಿದ್ದಾರೆ ಎಂದು ತಿಳಿಸಿದ್ದು ಆ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೇ ಹೌದು. ಕರಾರು ಪತ್ರವನ್ನು ಹಾಜರುಪಡಿಸಿರುವ ಕಾರಣ ನೀವು ಸುಳ್ಳು ಹೇಳುತ್ತಿದ್ದೀರ ಎಂದರೇ ಸರಿಯಲ್ಲ. ಎಷ್ಟು ತಿಂಗಳ ಒಳಗೆ ಕ್ರಯ ಕರಾರಿನಲ್ಲಿ ತಿಳಿಸಿರುವ ಹಣ ಸಂದಾಯ ಆಗುತ್ತದೆ ಎಂದು ತಿಳಿಸಿದ್ದಾರೆ ಎಂದರೇ ಸಾಕ್ಷಿ ದಿ **03.06.2019** ಗೆ ಸಂದಾಯ ಆಗುತ್ತದೆ ಎಂದು ಹೇಳಿದ್ದರು. ದಿ **03.06.2019** ರಲ್ಲಿ ಸಂದಾಯ ಆಗಿರುವುದಿಲ್ಲ ಆದ್ದರಿಂದ ದಾವೆ ದಾಖಲಿಸಿದ್ದೇನೆ. ನಾನು ದಿ **03.06.2019** ರ ಚೆಕ್ ನ್ನು ದಿ **31.08.2019** ರಲ್ಲಿ ಬ್ಯಾಂಕ್ ಗೆ ಸಲ್ಲಿಸಿರುತ್ತೇನೆ ಆಗ ಬ್ಯಾಂಕಿನವರು ಚೆಕ್ ನ ಸಮಯ ತೀರಿದೆ ಎಂದು ಹಿಂಬರಹ ಕೊಟ್ಟಿರುತ್ತಾರೆ. ದಿ **03.06.2019** ರ ಚೆಕ್ ನ್ನು ದಿ **31.08.2019** ಕ್ಕೆ ಹಾಜರು ಪಡಿಸಿದ್ದಾರೆ ಅದರ ಅವದಿ ಮುಗಿಯುತ್ತಿರಲಿಲ್ಲ ನನ್ನ ಅನುಕೂಲಕ್ಕೆ ತಕ್ಕಂತೆ ಬ್ಯಾಂಕಿನಲ್ಲಿ ಹಿಂಬರಹ ಪಡೆದಿದ್ದೆನೆ ಎಂದರೆ ಸುಳ್ಳು.

**4.** ಬ್ಯಾಂಕಿನ ಹಿಂಬರಹ ವನ್ನು ದಿಃ 03.09.2019 ರಲ್ಲಿ ನೀಡಿದ್ದೀರಾ ಎಂದರೆ ಹೌದು. ಈ ದಾವೆಯನ್ನು ನ್ಯಾಯಾಲಯದಲ್ಲಿ ದಿ 09.11.2020 ರಂದು ದಾಖಲೆ ಮಾಡಿದ್ದೇನೆ ಎಂದರೇ ಹೌದು. ದಿ 21.10.2019 ರಂದು 1ನೇ ಪ್ರತಿವಾದಿಗೆ ನೋಟೀಸ್ ನೀಡಿದ್ದೇವೆ ಎಂದು ದಾಖಲೆ ಹಾಜರುಪಡಿಸಿದ್ದೇನೆ ಎಂದರೇ ಹೌದು. ನೋಟೀಸ್ ಕಳುಹಿಸಿರುವ ಬಗ್ಗೆ ಅಂಚೆ ರಶೀದಿಯನ್ನು ಹಾಜರುಪಡಿಸಿಲ್ಲ ಎಂದರೇ ಸರಿಯಲ್ಲ. 1ನೇ ಪ್ರತಿವಾದಿಗೆ ನೀಡಿರುವ ನೋಟೀಸು ಜಾರಿಯಾಗಿದೆ ಅಥವಾ ಇಲ್ಲ ಎಂಬುದನ್ನು ದಾಖಲೆ ಹಾಜರುಪಡಿಸಿಲ್ಲ ಎಂದರೇ ಸರಿಯಲ್ಲ. ಹಣ ಸಂದಾಯ ಆಗದೆ ಇದ್ದಾಗ ಕಂದಾಯ ಇಲಾಖೆ ಹೋಗಿ ಖಾತೆ ಮಾಡಿಕೊಡ ಬೇಡಿ ಎಂದು ಹೇಳಿದ್ದೀರ ಎಂದರೇ ಇಲ್ಲ. ಕ್ರಯ ವಾದ ನಂತರ 1ನೇ ಪ್ರತಿವಾದಿ ಖಾತೆ ವರ್ಗಾವಣೆ ಯಾಗಿದೆ ಎಂದರೇ ಹೌದು. ಆ ನಂತರ 1ನೇ

ಪ್ರತಿವಾದಿ 2ನೇ ಪ್ರತಿವಾದಿಗೆ ದಿ 24.02.2020 ರಂದು ದಾವಾ ಸ್ವತ್ತನ್ನು ಮಾರಾಟ ಮಾಡಿದ್ದೀರ ಎಂದರೇ ಹೌದು. 1ನೇ ಪ್ರತಿವಾದಿ ಕ್ರಯದ ಹಣವನ್ನು ಸಂಪುರ್ಣವಾಗಿ ಪಾವತಿ ಮಾಡದಾ ಕಾರಣ ಆತನ ಹೆಸರಿಗೆ ಹಕ್ಕು ವರ್ಗಾವಣೆ ಆಗಬಾರದೆಂದು ಯಾವುದೇ ಆದೇಶವನ್ನು ತೆಗೆದುಕೊಂಡಿಲ್ಲ. ನಿಪಿ-6 ಆಧಾರದ 2 ನೇ ಪ್ರತಿವಾದಿ ಹೆಸರಿಗೆ ಖಾತೆ ವರ್ಗಾಣೆ ಆಗಿದೆ ಎಂದರೇ ಹೌದು. 1ನೇ ಪ್ರತಿವಾದಿಯಿಂ 2ನೇ ಪ್ರತಿವಾದಿಗೆ ವರ್ಗಾವಣೆ ಆದ ನಂತರ ಯಾವುದೆ ಕ್ರಮ ಕೈಗೊಂಡಿಲ್ಲ ಎಂದರೇ ಕ್ರಯ ಪತ್ರ ಆಗಿರುವುದು ನನಗೆ ಗೊತ್ತಿಲ್ಲ.

5. ದಿ 03.09.2019 ರಂದು ಹಿಂಬರಹ ಬಂದ ನಂತರ ತಕ್ಷಣದಲ್ಲಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಬಹುದಾಗಿತ್ತು ಒಂದುವರೆ ವರ್ಷಗಳು ಸುಮ್ಮನಿದ್ದೀರಿ ಎಂದರೇ ಸಾಕ್ಷಿ ಹಿಂಬರಹ ಬಂದ ತಕ್ಷಣವೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೇವೆ, ನನ್ನ ಪ್ರಕಾರ 1ನೇ ಪ್ರತಿವಾದಿ ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ 6 ಲಕ್ಷ ಕೊಡಬೇಕು ಎಂದರೇ ಹೌದು. 2ನೇ ಪ್ರತಿವಾದಿಯ ಪರಿಚಯ ನನಗೆ ಇರುವುದಿಲ್ಲ. 2ನೇ ಪ್ರತಿವಾದಿಯಿಂದ ನನಗೆ ಯಾವುದೇ ಹಣ ಬರಬೇಕಿಲ್ಲ. ಕ್ರಯ ಪ್ರಕಾರ 2ನೇ ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕರು ಎಂದರೇ ಹೌದು ಎಂದು ಹೇಳಿ ಅವರು ಸಹ ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು**)**.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.**)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು**)**

**(**ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)**

**(**ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. **)**